6. ಗಮನ ಸೆಳೆಯುವ ಸೂಚನೆಗಳು.

ಅ) ವಿಷಯ: ಪಟ್ಟಣ ಪ್ರದೇಶಗಳಲ್ಲಿ ರಸ್ತೆ ಅಗಲೀಕರಣಕ್ಕೆ ಕಟ್ಟಡಗಳನ್ನು ನೆಲಸಮ ಮಾಡುತ್ತಿರುವ ಬಗ್ಗೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೆ, ಪಟ್ಟಣ ಪ್ರದೇಶಗಳಲ್ಲಿ ರಸ್ತೆ ಅಗಲೀಕರಣಕ್ಕಾಗಿ ಕಟ್ಟಡಗಳನ್ನು ನೆಲಸಮ ಮಾಡುತ್ತಿರುವುದರಿಂದ ಉಂಟಾಗುತ್ತಿರುವ ಪರಿಸ್ಥಿತಿ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಮಾನ್ಯ ವಿಧಾನಸಭಾ ಸದಸ್ಯರಾದ ಜೆ.ಸಿ. ಮಾಧುಸ್ವಾಮಿಯವರ ಗಮನಸೆಳೆಯುವ ಸೂಚನೆಯು ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದ್ದು, ಈಗಾಗಲೇ ಸದರಿ ಪ್ರಶ್ನೆಗೆ ಉತ್ತರಿಸಲು ಒಂದು ವಾರ ಕಾಲಾವಕಾಶವನ್ನು ದಿನಾಂಕ: 23.3.2006ರಂದು ಕೋರಲಾಗಿತ್ತು. ಪರಿಸ್ಥಿತಿಯನ್ನು ಪರಿಶೀಲಿಸಲಾಗಿ ಸದರಿ ಪ್ರಶ್ನೆಗೆ ಮಾಹಿತಿಯನ್ನು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಂದ ಹಾಗೂ ರಾಜ್ಯದ 227 ಸ್ಥಳೀಯ ಸಂಸ್ಥೆಗಳಿಂದ ವರದಿಯನ್ನು ಪಡೆದು ಕ್ರೋಢೀಕರಿಸಿ ಉತ್ತರಿಸಬೇಕಾಗಿರುವುದರಿಂದ ಈ ಪ್ರಶ್ನೆಗೆ ಉತ್ತರಿಸಲು ಮತ್ತೆ ಒಂದು ವಾರ ಕಾಲಾವಕಾಶವನ್ನು ನೀಡುವಂತೆ ಕೋರುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಇದು ಸಲ್ಪ ತಪ್ಪು ಗ್ರಹಿಕೆಯಾಗಿಬಿಟ್ಟಿದೆ. ನಾನು ಯಾವ್ಯಾವ ಊರಿನಲ್ಲಿ ಎಷ್ಟು ಕಟ್ಟಡಗಳನ್ನು ನೆಲಸಮ ಮಾಡಿದ್ದೀರಿ? ಏನೇನು ಮಾಡಿದ್ದೀರಿ? ಎಂದು ನನ್ನ ಗಮನಸೆಳೆಯುವ ಸೂಚನೆಯಲ್ಲಿ ಕೇಳಲಿಲ್ಲ. What is the policy of the Governmet? ಅನಧಿಕೃತ ಕಟ್ಟಡವನ್ನು ಒಡೆಯುತ್ತಿದ್ದೀರೋ? ಅಧಿಕೃತ ಕಟ್ಟಡಗಳನ್ನು ಒಡೆಯುತ್ತಿದ್ದೀರೋ? ನಿಯಮ ಏನು ಮಾಡಿದ್ದೀರಿ? ಎನ್.ಹೆಚ್. ನಲ್ಲಿ ಏನು ಮಾಡುತ್ತಿದ್ದೀರಿ? ಸ್ಟೇಟ್ ಹೈವೇಯಲ್ಲಿ ಏನು ಮಾಡುತ್ತಿದ್ದೀರಿ? ಮುನಿಸಿಪಾಲಿಟಿಯಲ್ಲಿ ಏನು ಮಾಡುತ್ತಿದ್ದೀರಿ? Which authority ಇದನ್ನು ಕೇಳಿಕೊಳ್ಳುತ್ತಿದೆ? ಅಕ್ವೈರ್ ಮಾಡಿದ್ದನ್ನು ಗುರುತಿಸುವವರು ಯಾರು? ಅದಕ್ಕೆ ನೋಟೀಸ್ ಕೊಟ್ಟಿದೆಯೆ? ಈ legal implications ಬಗ್ಗೆ ಇಲ್ಲಿ ಚರ್ಚೆಯಾಗಲಿ ಎಂದು ಕೇಳಿದ್ದೇನೆ. ಅದು ಎಲ್ಲಾ ಪುರಸಭೆಗಳಿಂದ ತರಿಸಿಕೊಂಡು ಹೇಳಿದರೆ ನನ್ನದೇನೂ ತಕರಾರಿಲ್ಲ. ನಾನು ಮುಖ್ಯಮಂತ್ರಿಯವರಿಗೆ ಹೇಳುವುದು, ಒಂದು ನಿಯಮ ಇರಬೇಕು. ಒಂದು ನೀತಿ ಇರಬೇಕು. ಸರ್ಕಾರ ಅಂದಮೇಲೆ, ಒಂದು ನಿಯಮ ನೀತಿ ಇರಬೇಕು. ಏನಾಗಿದೆ ಎಂದರೆ ಯಾರೋ ಡೆಪ್ಯುಟಿ ಕಮಿಷನರ್ ಹೋಗುತ್ತಾರೆ ಕೆಂಪು ಪಟ್ಟಿ ಎಳೆದು ಬರುತ್ತಾರೆ. ಯಾರೋ ಅಸಿಸ್ಟೆಂಟ್ ಕಮಿಷನರ್ ಹೋಗುತ್ತಾರೆ ಕೆಂಪು ಪಟ್ಟೆ ಎಳೆದು ಬರುತ್ತಾರೆ. ನಾನು ಮತ್ತು ಮಾನ್ಯ ಶ್ರೀರಾಮರೆಡ್ಡಿಯವರು ಗೊಟ್ಟಿಕೆರೆಗೆ ಹೋಗಿದ್ದೆವು. ಮಾನ್ಯ ಮುಖ್ಯಮಂತ್ರಿಯವರಿಗೂ ಗೊತ್ತು. ಯಾರೋ ಬುಲ್ಡೋಜರ್ ತೆಗೆದುಕೊಂಡು ಹೋಗಿ ಒಡೆಯುತ್ತಿದ್ದಾರೆ. ಯಾರು? ಏಕೆ ಒಡೆಯುತ್ತಿದ್ದೀರಿ ಎಂದರೆ ಉತ್ತರ ಹೇಳುವವರಿಲ್ಲ. ಒಬ್ಬ ಗೌರ್ನಮೆಂಟ್ ಅಧಿಕಾರಿ ಸ್ಥಳದಲ್ಲಿ ಇಲ್ಲ, ಜಾಗವನ್ನು ನಿಂತುಕೊಂಡು ತೋರಿಸುವವರಿಲ್ಲ. ಇಷ್ಟು ಅಡಿ ಅಕ್ಕೈರ್ ಆಗಿದೆ, ಇಂಥ ಏರಿಯಾ ಅಕ್ಕೈರ್ ಆಗಿದೆಯೆಂದು ಹೇಳುವವರಿಲ್ಲ. ನೀವು ಅನುಮತಿ ಕೊಟ್ಟಿರುವುದು ಎಷ್ಟು? ಅವರು ಒಡೆಯುವುದು ಎಷ್ಟು? ಯಾರ್ಯಾರಿಗೆ ಎಷ್ಟೆಷ್ಟು ಕೊಟ್ಟಿದ್ದೀರಿ ಎಂಬ ಬಗ್ಗೆ ಅನಂತರ ಮಾತನಾಡಬಹುದು. ಇದಕ್ಕೆ ಇರುವ ನೀತಿಯೇನು? ರಸ್ತೆ ಅಗಲೀಕರಣದ್ದು ಒಂದು ದುರಂತವಾಗಿ

ಬಿಟ್ಟಿದೆ. ಪುರಸಭೆ ವ್ಯಾಪ್ತಿಯೊಳಗೆ ಒಡೆಯುತ್ತಿದ್ದೀರಿ. ಸ್ಟೇಟ್ ಹೈವೆಯಲ್ಲಿ ನ್ಯಾಷನಲ್ ಹೈವೆಯಲಿ ಒಡೆಯುತ್ತಿದ್ದೀರಿ. Road centre ನಿಂದ 45 ಮೀಟರ್ ಒಡೆಯಬೇಕೆಂದರೆ ಇಷ್ಟು ವರ್ಷ ಬಂದಿರುವ ಮಾನ್ಯುಮೆಂಟ್ಸ್‌ನೆಲ್ಲಾ ಒಡೆಯಬೇಕಾದಂಥ ಸ್ಥಿತಿ ತಂದಿದ್ದೀರಿ. ಈ ಬಗ್ಗೆ ಸರ್ಕಾರಕ್ಕೆ ಏನಾದರೂ ಒಂದು ನೀತಿ ಇದೆಯೆ? ಕಾಲಕಾಲಕ್ಕೆ ನೀವು ಕೊಟ್ಟಿರುವ ಆದೇಶಗಳಿಗೆ ವೈಜ್ಞಾನಿಕವಾಗಿ ಏನಾದರೂ back ground ಇದೆಯೋ? ಅವರು ಹೇಳಬಹುದಾಗಿತ್ತು. ಏತಕ್ಕೆ ಕಾಲಾವಕಾಶ ಕೇಳಿದ್ದಾರೋ ನನಗೆ ಗೊತ್ತಿಲ್ಲ. ಮತ್ತೆ ಕಾಲಾವಕಾಶ ಬೇಕಾದರೆ ಈ ಶಾಸನ ಸಭೆ ಮುಕ್ತಾಯವಾಗುವುದರ ಒಳಗೆ ಈ ವಿಷಯವನ್ನು ನಾವು ಚರ್ಚೆ ಮಾಡಲು ಬಿಡಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ನಾನು ಇದಕ್ಕೆ ಸಹಿ ಮಾಡಿದ್ದೇನೆ. ನಾನು ಒಂದು ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು: ಅದನ್ನು ಒಪ್ಪಿಕೊಂಡೆ. ಮಾನ್ಯ ಮುಖ್ಯಮಂತ್ರಿಯವರು ಸಮಯ ಕೇಳಿದ್ದಾರೆ. ಆವತ್ತು ತಾವು ಕೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಒಂದು ನಿಮಿಷ ಕೇಳಿ. ನಾವು ಇಲ್ಲಿ ಪ್ರತ್ಯೇಕವಾಗಿ ಬಹಳ ಮುಖ್ಯವಾಗಿ ಕೇಳುತ್ತಿರುವುದು, ರಾಜ್ಯದ ಮಾಹಿತಿಯನ್ನೆಲ್ಲಾ ಕೇಳಲಿಲ್ಲ. ನಾವು ಕೇಳಿರತಕ್ಕದ್ದು ಸರ್ಕಾರದ ನಿಯಮವೇನು? ನಾನು ಮಾನ್ಯ ಮಾಧುಸ್ವಾಮಿಯವರು ಗೊಟ್ಟಿಗೆರೆಗೆ ಹೋಗಿದ್ದೆವು. ಬಿ.ಎಂ.ಐ.ಸಿ.ಪಿ.ಯಿಂದ ರೋಡ್ ಅಕ್ವೈರ್ ಆಗಿದೆ. ಅಕ್ವೈರ್ ಆಗಿರತಕ್ಕ ಭೂಮಿಯನ್ನು ಬಿಟ್ಟು ಬೇರೆ ಕಡೆ ಬುಲ್ಡೋಜರ್ ತೆಗೆದುಕೊಂಡು ಹೋಗಿ ಒಡೆಯುತ್ತಿದ್ದಾರೆ. ಆ ರೀತಿ ಒಡೆಯಬೇಕಾದರೆ ಅಕ್ವೈರ್ ಭೂಮಿ ಯಾವ ಜಾಗದಲ್ಲಾಗಿದೆ, ಇಂಥ ಭೂಮಿಯಲ್ಲೇ ರಸ್ತೆ ಮಾಡಬೇಕೆಂದು ತೋರಿಸತಕ್ಕ ಪಿ.ಡಬ್ಲ್ಯೂ.ಡಿ. ಅಧಿಕಾರಿಗಳು ಅಲ್ಲಿದ್ದಾರೆಯೆ? ಅದನ್ನು ತೋರಿಸಿದ್ದಾರೆಯೆ? ಅಥವಾ ಪಿ.ಎಂ.ಐ.ಸಿ.ಪಿ. ನವರೇ ಯಾರಾದರೂ ಅವರಷ್ಟಕ್ಕೆ ಅವರೇ ಹೋಗಿ ಒಡೆದರಾ? Who is the authority? ನೀವು ಅಕ್ವೈರ್ ಮಾಡಿಕೊಳ್ಳಿ, ಕಾನೂನಿನಲ್ಲಿ ಅವಕಾಶ ಇದೆ. ರಸ್ತೆ ಮಾಡಬೇಕಾದರೆ ಸಾರ್ವಜನಕ ಕೆಲಸಗಳಿಗೆ ನೀವು ಕಟ್ಟಡಗಳನ್ನು ಅಕ್ವೈರ್ ಮಾಡಿಕೊಳ್ಳಬಹುದು. ಕಾನೂನಿನ ಅಡಿಯಲ್ಲಿ ಅದನ್ನು ಪರಿಹಾರ ಮಾಡಬಹುದು. ಪ್ರಶ್ನೆ ಇರತಕ್ಕದ್ದು ಯಾವುದೇ ಆಧಾರವಿಲ್ಲದೇನೇ, ಮಾಹಿತಿ ಇಲ್ಲದೆಯೆ ಯಾರೋ ಒಬ್ಬರು ಕಂಟ್ರಾಕ್ಟರ್ ಬುಲ್ಡೋಜರ್ ತೆಗೆದುಕೊಂಡು ಹೋಗಿ ಜೆ.ಸಿ.ಬಿ. ತೆಗೆದುಕೊಂಡು ಹೋಗಿ ಆ ಜಾಗದಲ್ಲಿ ರಸ್ತೆ ಮಾಡಿಕೊಂಡು ಹೋಗುತ್ತಿದ್ದರೆ ಸರ್ಕಾರ ನೀತಿಯೇನು ಎನ್ನತಕ್ಕದಷ್ಟೇ ನಮ್ಮ ಪ್ರಶ್ನೆ.

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಯವರು ಸಮಯ ಕೇಳಿದ್ದಾರೆ. ಸದನ ಮುಗಿಯುವುದರೊಳಗೆ ವಿವರವಾದ ವರದಿಯನ್ನು ತರಿಸಿ ಮಂಡಿಸುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಅಲ್ಲಿಯವರೆಗೆ ಅಂಥ ಡೆಮಾಲಿಷನ್ಸ್ ಎಲ್ಲವನ್ನೂ ನಿಲ್ಲಿಸಬೇಕು.

ಶ್ರೀ ಎಸ್. ಶಿವಾನಂದ ಪಾಟೀಲ್: ಎಲ್ಲವನ್ನೂ ನಿಲ್ಲಿಸಲು ಆಗುವುದಿಲ್ಲ.

ಆ) ವಿಷಯ: ಲೋಕೋಪಯೋಗಿ ಇಲಾಖೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ಹೊರಡಿಸಿರುವ ಸುತ್ತೋಲೆ ಬಗ್ಗೆ.

ಶ್ರೀ ಬಿ. ಶಿವರಾಮ್ (ಗಂಡಸಿ): ಮಾನ್ಯ ಅಧ್ಯಕ್ಷರೆ, ಲೋಕೋಪಯೋಗಿ ಇಲಾಖೆಯಿಂದ ಹೊರಡಿಸಿರತಕ್ಕ ಕೆಲವು ಸುತ್ತೋಲೆಗಳನ್ನು ಉಲ್ಲೇಖಿಮಾಡುವುದರ ಮೂಲಕ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಏನು ಕ್ರಮ ತೆಗೆದುಕೊಂಡಿದ್ದಾರೆ? ಕೆಲವು ಗುತ್ತಿಗೆದಾರರು ಈಗಾಗಲೇ ಅದರ ಬಗ್ಗೆ ಪ್ರತಿಭಟನೆಯನ್ನು ಮಾಡಿದ್ದಾರೆ. ಆ ವಿಚಾರವಾಗಿ ಮಾನ್ಯ ಮುಖ್ಯಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.